Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 27/2021

ಪ್ರಾ.ಸಾ. 5 ಚಾ.ಸಾ. 8

| | | |
|---|---|---|
| ಹೆಸರು | : | ಗುರುನಾಥ ರೆಡ್ಡಿ |
| ತಂದೆಯ ಹೆಸರು | : | ಮಲ್ಲಿಕಾರ್ಜುನ ರೆಡ್ಡಿ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 11-02-2026
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2016 ಇಂದ 2022 ರ ವರೆಗೆ ನಾನು ಯಾದಗಿರಿ ಗ್ರಾಮಿಣ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 30-03-2021 ರಂದು ಮಃ 3-20 ಕ್ಕೆ ಚಾಸಾಃ 1 ಪಿ ಎಸ್ ಐ ರವರು, ಚಾಸಾಃ 6, 7 ರವರು ಠಾಣೆಯಲ್ಲಿದ್ದಾಗ ಚಾಸಾಃ 11 ರವರು ಚಾಸಾಃ 1 ರವರ ವರದಿ ಆಧರಿಸಿ ಮುದನಾಳ ಗ್ರಾಮಕ್ಕೆ ಗಾಂಜಾ ದಾಳಿ ಮಾಡುವ ಕುರಿತು ಆರೋಪಿ ಮನೆಯ ಪಕ್ಕದ ತರಕಾರಿ ಬೆಳೆಯೊಂದಿಗೆ ಗಾಂಜಾ ಬೆಳೆದಿದ್ದ ವಿಚಾರವಾಗಿ ಹೊಗುವ ಸಂಬಂದ ಅದರಂತೆ ಚಾಸಾಃ 2 ಮತ್ತು 3 ರವರನ್ನು ಪಂಚರಾಗಿ ನಮ್ಮ ಸಿಬ್ಬಂದಿ ಯೊಂದಿಗೆ ಮಃ 3-30 ಕ್ಕೆ ಠಾಣೆಯಿಂದ ಹೊರಟು 4-00 ಕ್ಕೆ ಮುದ್ನಾಳ ಗ್ರಾಮಕ್ಕೆ ತಲುಪಿದೆವು. ಅಲ್ಲಿ ಆರೋಪಿಯ ಮನೆಯ ಪಕ್ಕದ ತೊಟದಲ್ಲಿ ತರಕಾರಿ ಬೆಳೆ ಪರಿಶೀಲಿಸಿದಾಗ ಅಲ್ಲಿ 3 ಗಾಂಜಾ ಗಿಡ ಇತ್ತು. ತೊಟದಲ್ಲಿ ಆರೋಪಿ ಮಾನಪ್ಪ ಇದ್ದರು. ಆತನ ಗರುತು ಮತ್ತು ವಿವರಣೆ ಖಾತ್ರಿ ಪಡಿಸಿಕೋಂಡಿರುತ್ತೆವೆ. ನಂತರ ಮನೆಯ ಹಿಂದೆ ಪ್ಲಾಸ್ಟಿಕ ಚೀಲದಲ್ಲಿ ಸುಮಾರು 300 ಗ್ರಾಂ ನಷ್ಟು ಒಣ ಗಾಂಜಾ ಇತ್ತು. ಅದನ್ನು ತಾನು ಬೆಳೆದು ಮಾರಾಟ ಮಾಡುತ್ತೆನೆ ಮತ್ತು ಸೇವನೆ ಮಾಡುತ್ತೆನೆ ಎಂದು ಹೇಳಿದ. ಅದೆ ದಿನ ಸಂಜೆ 4-00 ರಿಂದ 5-00 ಗಂಟೆವರೆಗೆ ಪಂಚನಾಮೆ ಮಾಡಿರುತ್ತೆವೆ ಸದರಿ. ಹಸಿ ಗಾಂಜಾ 1 ಕೆಜಿ 300 ಗ್ರಾಂ ಇತ್ತು. ನಂತರ ಆರೋಪಿಯ ಬಳಿ ರೂ.೩30/- ನಗದು

ವಶಪಡಿಸಿಕೋಂಡಿರುತ್ತೆವೆ. ಅದೆ ದಿನ ಸಂಜೆ **5-30** ಕ್ಕೆ ಠಾಣೆಗೆ ಹಿಂದಿರುಗಿರುತ್ತೆವೆ. ಜಪ್ತಿ ಪಡಿಸಿಕೊಂಡ ವಸ್ತು ಗಳನ್ನು ನೊಡಿದರೆ ಗುರುತಿಸುತ್ತೆನೆ ಸಾಕ್ಷಿಗೆ ಒಂದು ಚಿಲುಮೆ, ಒಣ ಮತ್ತು ಹಸಿ ಗಾಂಜಾದ ಮಾದರಿಯನ್ನು, 3 ಪ್ರತ್ಯೆಕ ಸಿಲ್ ಮಾಡಲಾದ ಬಿಳಿಯ ಬಟ್ಟೆಗಳಿಂದ ತೆಗೆದು ನ್ಯಾಯಾಲಯದ ಅನೂಮತಿಯೋಂದಿಗೆ ಸಾಕ್ಷಿಗೆ ತೊರಿಸಿ ಅವುಗಳನ್ನು ಗುರುತಿಸಿದ್ದು. ಮುಮಾ 1 ರಿಂದ 3 ಎಂದು ಕ್ರಮವಾಗಿ ಗುರತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೊಪಿಯನ್ನು ನೊಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಮ್ ವಿ ಕೆ ವಕೀಲರಿಂದ</u>

3. ದಿಃ **30-03-2021** ರಂದು ನಮ್ಮ ಠಾಣಾಧಿಕಾರ ನಾನೆ ಇದ್ದೆ. ನಮ್ಮ ಠಾಣೆಯಲ್ಲಿ ಚಲನವಲನ ರಿಜೆಸ್ಟರ ಇಲ್ಲಾ. ಚಾಸಾಃ **2** ಮತ್ತು **3** ರವರು ಮುದ್ನಾಳ ಗ್ರಾಮದವರು ಅವರಿಗೆ ನೋಟಿಸ ಅನ್ನು ಮದ್ಯಾಹ್ನ **3-00** ಕ್ಕೆ ಪಿ ಎಸ್ ರವರು ಸಿಬ್ಬಂದಿ ಮೂಲಕ ನೀಡಿರುತ್ತಾರೆ. ಯಾರು ಸಿಬ್ಬಂದಿ ಎಂದು ಗೊತ್ತಿಲ್ಲ. ಮದ್ಯಾಹ್ನ **3-20** ಕ್ಕೆ ಚಾಸಾಃ **2** ಮತ್ತು **3** ರವರು ಠಾಣೆಗೆ ಬಂದಿರುತ್ತಾರೆ ನಮ್ಮ ಠಾಣೆಯಿಂದ ಮುದ್ನಾಳ ಕ್ಕೆ ಹೊಗಲು **30** ನಿಮಿಷ ಬೇಕು ಎಂದರೆ ಸರಿ. ಸದರಿ ಜಮಿನಿನ ಸರ್ವೆ ನಂಬರ ನೆನಪಿಲ್ಲ ಅದು ಯಾರಿಗೆ ಸೆರಿತ್ತು ಎಂದರೆ ಗೊತ್ತಿಲ್ಲ . ಸದರಿ ಹೊಲದ ಚಕ್ಕು ಬಂದಿ ಗೊತ್ತಿಲ್ಲ. ಸದರಿ ಹೊಲ ಮುದ್ನಾಳ ಗ್ರಾಮಕ್ಕೆ ಹೊಂದಿಕೊಂಡಂತೆ ಇದೆ. ಸದರಿ ಹೊಲದಲ್ಲಿ ವಿವಿಧ ತರಕಾರಿ ಬೆಳೆಗಳನ್ನು ಎಷ್ಟು ಬೆಳೆದಿದ್ದರು ಎಂದು ಹೇಳಲು ಬರುವುದಿಲ್ಲ. ಸದರಿ ಹೊಲದ ಯಾವ ಭಾಗದಲ್ಲಿ **3** ಗಾಂಜಾ ಗಿಡ ಬೆಳೆದಿತ್ತು ಎಂದು ಹೇಳಲು ಬರುವುದಿಲ್ಲ. ಗಾಂಜಾ ಗಿಡ ಮತ್ತು ಚಂಡು ಹೂವಿನ ಗಿಡಗಳು ಒಂದೆ ಇರುತ್ತವೆ ಎಂದರೆ ಸರಿಯಲ್ಲ. ಅವುಗಳ ಎಲೆಗಳು ಬೇರೆ ಬೇರೆ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ **3** ಗಾಂಜಾ ಗಿಡಗಳು ಎಂದು ಹೇಳಿದ ಅವು ಚಂಡು ಹೂವಿನ ಗಿಡಗಳು ಎಂದರೆ ಸರಿಯಲ್ಲ. ಸದರಿ **3** ಗಾಂಜಾ ಗಿಡಗಳನ್ನು ತೂಕ ಮಾಡಿಲ್ಲ. ನಾನು ಅಂಕೆ ಸಂಖ್ಯೆಯ ಉದ್ದೆಶಕ್ಕಾಗಿ ಹಸಿ ಮತ್ತು ಒಣ ಗಾಂಜಾ ಇದ್ದವು ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

4. ದಿಃ **30-03-2021** ರಂದು ಮಃ **3-20** ಕ್ಕೆ ಚಾಸಾಃ 1 ಪಿ ಎಸ್ ಐ ರವರು, ಚಾಸಾಃ **6, 7** ರವರು ಠಾಣೆಯಲ್ಲಿದ್ದಾಗ ಚಾಸಾಃ 11 ರವರು ಚಾಸಾಃ 1 ರವರ ವರದಿ ಆಧರಿಸಿ ಮುದನಾಳ ಗ್ರಾಮಕ್ಕೆ ಗಾಂಜಾ ದಾಳಿ ಮಾಡುವ ಕುರಿತು ಆರೋಪಿ ಮನೆಯ ಪಕ್ಕದ ತರಕಾರಿ ಬೆಳೆಯೊಂದಿಗೆ ಗಾಂಜಾ ಬೆಳೆದಿದ್ದ ವಿಚಾರವಾಗಿ ಹೊಗುವ ಸಂಬಂದ ಅದರಂತೆ ಚಾಸಾಃ **2** ಮತ್ತು **3** ರವರನ್ನು ಪಂಚರಾಗಿ ನಮ್ಮ ಸಿಬ್ಬಂದಿ ಯೊಂದಿಗೆ ಮಃ **3-30** ಕ್ಕೆ ಠಾಣೆಯಿಂದ ಹೊರಟು **4-00** ಕ್ಕೆ ಮುದ್ನಾಳ ಗ್ರಾಮಕ್ಕೆ ತಲುಪಿದೆವು. ಅಲ್ಲಿ ಆರೋಪಿಯ ಮನೆಯ ಪಕ್ಕದ

ತೊಟದಲ್ಲಿ ತರಕಾರಿ ಬೆಳೆ ಪರಿಶೀಲಿಸಿದಾಗ ಅಲ್ಲಿ 3 ಗಾಂಜಾ ಗಿಡ ಇತ್ತು. ತೊಟದಲ್ಲಿ ಆರೋಪಿ ಮಾನಪ್ಪ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನ ಗರುತು ಮತ್ತು ವಿವರಣೆ ಖಾತ್ರಿ ಪಡಿಸಿಕೋಂಡಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮನೆಯ ಹಿಂದೆ ಪ್ಲಾಸ್ಟಿಕ ಚೀಲದಲ್ಲಿ ಸುಮಾರು 300 ಗ್ರಾಂ ನಷ್ಟು ಒಣ ಗಾಂಜಾ ಇತ್ತು. ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ತಾನು ಬೆಳೆದು ಮಾರಾಟ ಮಾಡುತ್ತೆನೆ ಮತ್ತು ಸೇವನೆ ಮಾಡುತ್ತೆನೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ದಿನ ಸಂಜೆ 4-00 ರಿಂದ 5-00 ಗಂಟೆವರೆಗೆ ಪಂಚನಾಮೆ ಮಾಡಿರುತ್ತೆವೆ ಸದರಿ. ಹಸಿ ಗಾಂಜಾ 1 ಕೆಜಿ 300 ಗ್ರಾಂ ಇತ್ತು. ನಂತರ ಆರೋಪಿಯ ಬಳಿ ರೂ.830/- ನಗದು ವಶಪಡಿಸಿಕೋಂಡಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ದಿನ ಸಂಜೆ 5-30 ಕ್ಕೆ ಠಾಣೆಗೆ ಹಿಂದಿರುಗಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡ ವಸ್ತು ಗಳನ್ನು ನೊಡಿದರೆ ಗುರುತಿಸುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಹಿರಿಯ ಅಧಿಕಾರಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.